ವ್ಯಾಪ್ತಿಗೊಳಪಟ್ಟಿದ್ದು, ನಿಗಮವು ಎದುರಿಸುತ್ತಿರುವ ಕಾರ್ಯಾಚರಣೆ ಬಂಡವಾಳದ (Working Capital) ಕೊರತೆಯಿಂದಾಗಿ ಘಟಕದ ಉತ್ಪಾದನೆಗೆ ಬೇಕಾದ ರೇಷ್ಮೆ ಗೂಡನ್ನು ಖರೀದಿಸಲು ಸಾಧ್ಯವಾಗದೆ ಜನವರಿ 2003ರಿಂದ ಈ ಘಟಕದಲ್ಲಿ ಉತ್ಪಾದನಾ ಚಟುವಟಿಕೆಗಳು ಸ್ಥಗಿತಗೊಂಡಿರುತ್ತದೆ. ಆ ಘಟಕವಲ್ಲದೆ ನಿಗಮದ ಅಡಿ ಇತರೆ ಘಟಕಗಳು ಸಹ ಕಾರ್ಯನಿರ್ವಹಿಸುತ್ತಿದ್ದು, ಸಂಸ್ಥೆಯು ಹಣಕಾಸಿನ ದುಸ್ಥಿತಿಯಲ್ಲಿರುವ ಕಾರಣ ನಿಗಮವನ್ನು ಬಿ.ಐ.ಎಫ್.ಆರ್.ಗೆ ವಹಿಸಲಾಗಿತ್ತು. ಆ ಕುರಿತಂತೆ ಬಿ.ಐ.ಎಫ್.ಆರ್. ಸೂಚಿಸಿರುವುದರ ಮೇರೆಗೆ, ನಿಗಮದ ವ್ಯಾಪ್ತಿಗೆ ಬರುವ ಎಲ್ಲಾ ಘಟಕಗಳನ್ನು ಪುನಶ್ಚೇತನಗೊಳಿಸುವ ಕುರಿತಂತೆ, ಸಮಗ್ರ ಯೋಜನೆ ರೂಪಿಸಲಾಗಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ.

ಡಾ॥ ಎಸ್.ಎಲ್. ಭಾರತಿ ಶಂಕರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಉತ್ತರ ಕೊಟ್ಟಿರುವ ರೀತಿಯಲ್ಲಿ ಅವರು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎನ್ನುವುದು ನಮಗೆಲ್ಲರಿಗೂ ನೆಮ್ಮದಿ ತರುವಂತಹ ವಿಚಾರವಾಗಿದೆ. ಅಲ್ಲಿ ಖಾಸಗಿಯವರಿಂದ ನೂಲನ್ನು ಖರೀದಿ ಮಾಡುವಂತಾದ್ದು ಸರ್ಕಾರದ ಗಮನಕ್ಕೆ ಏನಾದರೂ ಬಂದಿದೆಯೇ? ಆಧುನೀಕರಣಗೊಂಡಿರುವಂತಹ ಟಿ.ನರಸೀಪುರ ಘಟಕ ಮುಚ್ಚಲು ಕಾರಣಗಳೇನು? ಕೆ.ಎಸ್.ಐ.ಸಿ.ಗೆ ಬಂಡವಾಳದ ಕೊರತೆ ಇದ್ದು, ಉತ್ಪಾದನಾ ಘಟಕಗಳೆಲ್ಲಾ ನಿಂತಿರುವುದರಿಂದ ಸುಮಾರು 4 ಕೋಟಿ ರೂಪಾಯಿಗಳ ನಷ್ಟವಾಗಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ಸನ್ಮಾನ್ಯ ಸಚಿವರು ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಹೆಚ್.ಎಂ.ರೇವಣ್ಣ : ಸನ್ಮಾನ್ಯ ಸಭಾಧ್ಯಕ್ಷರೇ, ಕೆ.ಎಸ್.ಐ.ಸಿ.ಯ ಅಡಿಯಲ್ಲಿ ನಾಲ್ಕು ಘಟಕಗಳು ಕೆಲಸ ಮಾಡುತ್ತಿವೆ. ಅವುಗಳು ಚನ್ನಪಟ್ಟಣ, ಕನಕಪುರ, ಟಿ.ನರಸೀಪುರ ಮತ್ತು ಮೈಸೂರಿನಲ್ಲಿವೆ. ಇವುಗಳಲ್ಲಿ ಮೈಸೂರು ಘಟಕ ಉತ್ತಮವಾಗಿ ಕೆಲಸ ಮಾಡಿದರೂ ಕೂಡ ಕನಕಪುರ ಮತ್ತು ಚನ್ನಪಟ್ಟಣ ಘಟಕಗಳಲ್ಲಿ ನಷ್ಟ ಉಂಟಾದಂತಹ ಸಮಯದಲ್ಲಿ, ಅದನ್ನು ಬಿ.ಐ.ಎಫ್.ಆರ್. ಮುಂದೆ ತರಲಾಗಿತ್ತು. ಆದರೆ ನಾವು ಮಾನ್ಯ ಮುಖ್ಯಮಂತ್ರಿಗಳಲ್ಲಿ ಆ ಬಗ್ಗೆ ಚರ್ಚಿಸಿ, ಅದನ್ನು ಬಿ.ಐ.ಎಫ್.ಆರ್.ನಿಂದ ಹೊರತು ಪಡಿಸಿದ್ದು, ಪುನಶ್ಚೇತನಗೊಳಿಸುವ ಸಲುವಾಗಿ ಆ ವಿಚಾರ ಕ್ಯಾಬಿನೆಟ್ ಮುಂದೆ ಬರುತ್ತಿದೆ. ಈ ಕಾರ್ಯವನ್ನು ನಾವು ಮತ್ತೆ ತೆಗೆದುಕೊಳ್ಳುತ್ತೇವೆ. ಮತ್ತೆ ಆ ಜನಕ್ಕೆ ಕೆಲಸವನ್ನು ಕೊಟ್ಟು, ಏನು ಹೆಚ್ಚಿಗೆ workers ಇದ್ದಾರೋ, ಅವರಿಗೆ VRS ಕೊಟ್ಟು ಅದನ್ನು ಪುನಃಶ್ಚೇತನ ಮಾಡುವಂತಹ ಕೆಲಸವನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ.

7. ಶಾಸನ ರಚನೆ

ಅ) ವಿಧೇಯಕಗಳನ್ನು ಮಂಡಿಸುವುದು

(i) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ, 2003 ಮಂಡನೆಗೆ ಅನುಮತಿ ಕೋರಿಕೆ

ಡಾ॥ ಜಿ.ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, "2003ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಸದನದ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ"

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2003ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಸದನದ ಮುಂದೆ ಮಂಡಿಸಲು ಅನುಮತಿ ನೀಡುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, "2003ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಸದನದ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು : *ವಿಧೇಯಕವನ್ನು ಮಂಡಿಸಲಾಗಿದೆ* ಅನುಬಂಧ–III

(ii) ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕ, 2003

ಶ್ರೀ ಡಿ.ಕೆ.ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, "2003ನೇ ಸಾಲಿನ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕವನ್ನು ಸದನದ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ".

ಅಧ್ಯಕ್ಷರು : ಪ್ರಸ್ತಾವ ಏನೆಂದರೆ:–

"2003ನೇ ಸಾಲಿನ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕವನ್ನು ಸದನದ ಮುಂದೆ ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, "2003ನೇ ಸಾಲಿನ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕವನ್ನು ಸದನದ ಮುಂದೆ ಮಂಡಿಸುತ್ತೇನೆ".

ಅಧ್ಯಕ್ಷರು : *ವಿಧೇಯಕವನ್ನು ಮಂಡಿಸಲಾಗಿದೆ* ಅನುಬಂಧ–IV

(iii) ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕ, 2003

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, "2003ನೇ ಸಾಲಿನ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಸದನದ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ".

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2003ನೇ ಸಾಲಿನ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಸದನದ ಮುಂದೆ ಮಂಡಿಸಲು ಅನುಮತಿ ನೀಡುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, "2003ನೇ ಸಾಲಿನ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಸದನದ ಮುಂದೆ ಮಂಡಿಸುತ್ತೇನೆ".

ಅಧ್ಯಕ್ಷರು : *ವಿಧೇಯಕವನ್ನು ಮಂಡಿಸಲಾಗಿದೆ* ಅನುಬಂಧ–V

(ಅ) ಪರ್ಯಾಲೋಚನಾ ಪ್ರಸ್ತಾವ

(ii) ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ವಿಧೇಯಕ, 2002.

3.40 ಪಿಎಂ

ಶ್ರೀ ಆರ್.ವಿ. ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೆ, "2002ನೇ ಸಾಲಿನ ಕರ್ನಾಟಕ ಕೈಗಾರಿಕಾ ಸೌಲಭ್ಯ ವಿಧೇಯಕವನ್ನು ಭಾರತದ ರಾಷ್ಟ್ರಪತಿಯವರಿಂದ ಹಿಂದಿರುಗಿಸಿದ್ದ ಮೇರೆಗೆ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.